ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕಂದಾಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 12/6/2020

ಶಿವಮೊಗ್ಗ ಕಲಬುರಗಿ

## ಭೂಮಿ ಖರೀದಿಸುವುದಕ್ಕೆ ರೈತರಲ್ಲದವರಿಗೂ ರಾಜ್ಯ ಮುಕ್ತ ಯಾವುದೇ ಆದಾಯ ಮಿತಿ ಇಲ್ಲ, ನಿರ್ಬಂಧಗಳೆಲ್ಲ ಸಡಿಲ

# ಸರ್ವರಿಗೂ ಕೃಷಿ ಭಾಗ್ಯ

12.06.2020

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದಲ್ಲಿ ಇನ್ನು ಮುಂದೆ ಯಾರು ಬೇಕಾದರೂ ಕೃಷಿ ಜಮೀನು ಖರೀದಿಸಲು ಸಾಧ್ಯವಾಗುವಂತೆ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತರುವ ಮಹತ್ವದ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ. ಹಾಲಿ ಕಾಯ್ದೆಯಲ್ಲಿ ಕೃಷಿ ಭೂಮಿ ಖರೀದಿಸುವುದಕ್ಕೆ ಕೆಲವು ನಿರ್ಬಂಧಗಳಿದ್ದವು. ಅವುಗಳನ್ನು ಸಡಿಲಿಸುವ ಜತೆಗೆ ಕಾಯ್ದೆ ಸೇವೆಯನ್ನು ಸರಳೀಕರಣಗೊಳಿಲು ಗುರುವಾರ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

» **ಸಚಿವ ಸಂಪುಟ ಸಭೆ ತೀರ್ಮಾನ**

» **ಅಧಿವೇಶನದಲ್ಲಿ ವಿಧೇಯಕ ಮಂಡಿಸಿ ಜಾರಿಗೆ ತರಲು ನಿರ್ಧಾರ**

ಕಾನೂನು ಸಚಿವ ಮಾಧುಸ್ವಾಮಿ ಸರ್ಕಾರದ ನಿರ್ಧಾರ ಕುರಿತ ಮಾಹಿತಿಯನ್ನು ಸಭೆಯ ಬಳಿಕ ಸುದ್ದಿಗಾರರಿಗೆ ನೀಡಿದರು. ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ತಮಿಳುನಾಡು ಹಾಗೂ ಕೇರಳದಲ್ಲಿ ಭೂಮಿ ಖರೀದಿಗೆ ನಿರ್ಬಂಧಿಸುವಂಥ ಕಾನೂನುಗಳಿಲ್ಲ. ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲೂ ಕೃಷಿಯೇತರರಿಗೆ ಕೃಷಿ ಜಮೀನು ಖರೀದಿಸುವುದಕ್ಕೆ ಅವಕಾಶವಿದೆ. ಅದೇ ರೀತಿ ನಮ್ಮಲ್ಲೂ ಕಾಯ್ದೆಗೆ ತಿದ್ದುಪಡಿ ತರಲು ಸಂಪುಟ ನಿರ್ಧರಿಸಿದೆ ಎಂದರು.

ಮೊದಲು 2 ಲಕ್ಷರೂ. ಮೇಲ್ಪಟ್ಟ ಕೃಷಿಯೇತರ ಆದಾಯವುಳ್ಳವರು ಕೃಷಿ ಜಮೀನು ಖರೀದಿಸುವುದಕ್ಕೆ ಅವಕಾಶ ಇರಲಿಲ್ಲ. ತರುವಾಯ ಈ ಆದಾಯದ ಮಿತಿ 25 ಲಕ್ಷ ರೂ.ಗೆ ಏರಿಕೆಯಾಗಿತ್ತು. ಜತೆಗೆ ಕೃಷಿ ಜಮೀನು ಹೊಂದಿದವರಷ್ಟೇ ಕೃಷಿ ಜಮೀನು ಖರೀದಿಸಬಹುದೆಂಬ ನಿಯಮ ಜಾರಿಯಲ್ಲಿತ್ತು. ಇದರಿಂದಾಗಿ ಅನೇಕರು ನೆರೆಯ ರಾಜ್ಯಗಳಲ್ಲಿ ಜಮೀನು ಖರೀದಿಸುತ್ತಿದ್ದಾರೆ. ನಮ್ಮ ರಾಜ್ಯದಲ್ಲೇ ಭೂಮಿಗಾಗಿ ಬಂಡವಾಳ ಹೂಡಿದರೆ ಹೆಚ್ಚು ಉಪಯೋಗ ಆಗಲಿದೆ ಎಂಬುದು ಸರ್ಕಾರದ ಉದ್ದೇಶವಾಗಿದೆ ಎಂದು ಸಚಿವರು ತಿಳಿಸಿದರು.

**ಹೈಕೋರ್ಟ್ ನಿರ್ದೇಶನ:** ರಾಜ್ಯ ಹೈಕೋರ್ಟ್ ಕೂಡ ಜನರಿಗೆ ಈ ಕಾಯ್ದೆಯಿಂದ ಆಗುತ್ತಿರುವ ಕಿರುಕುಳ ತಪ್ಪಿಸುವಂತೆ ಹಾಗೂ ಸರಳೀಕರಣಗೊಳಿಸುವಂತೆ ನಿರ್ದೇಶನ ನೀಡಿತ್ತೆಂದು ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದ್ದಾರೆ.

**ಪುಟ 6**



### 11.79 ಲಕ್ಷ ಹೆಕ್ಟೇರ್ ಬೀಳು ಭೂಮಿ



**ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಕಲಂ 79 ಎ ಮತ್ತು 79 ಬಿ ಪ್ರಕಾರ ಸಕ್ರಮ ಕೋರಿ ಒಟ್ಟು 83,171 ಪ್ರಕರಣ ದಾಖಲಾಗಿವೆ. ಒಟ್ಟು 1,76,180 ಎಕರೆ ವಿಸ್ತೀರ್ಣ ಒಳಗೊಂಡಿದೆ. ಒಟ್ಟು ಪ್ರಕರಣಗಳ ಪೈಕಿ 12,231 ಪ್ರಕರಣ ಬಾಕಿ ಇವೆ. ಅದರಲ್ಲಿ 24,553 ಎಕರೆ ವಿಸ್ತೀರ್ಣದ ಜಮೀನು ಇದೆ. ಒಟ್ಟು 190.50 ಲಕ್ಷ ಹೆ. ಜಮೀನು ಇದ್ದು, ಅದರಲ್ಲಿ ಅರಣ್ಯ ಭೂಮಿ 30.73 ಲಕ್ಷ ಹೆ. ಇದೆ. ಅದೇ ರೀತಿ ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನು 22.94 ಲಕ್ಷ ಹೆ. ಇದೆ. ಹಾಗೆಯೇ ಬೀಳು ಬಿದ್ದ ಜಮೀನು 22.07 ಲಕ್ಷ ಹೆ. ಆಗಿದೆ. ವ್ಯವಸಾಯ ಮಾಡದೇ ಬೀಳು ಬಿದ್ದ ಜಮೀನುಗಳು ಒಟ್ಟು 11.79 ಲಕ್ಷ ಹೆ. ಇದೆ. ಆದ್ದರಿಂದ ಕೃಷಿಕರಲ್ಲದವರು ಈಗಲೂ ಕೃಷಿ ಜಮೀನು ಖರೀದಿಸಿದರೆ ಕೃಷಿ ಉತ್ಪಾದನೆ ಹೆಚ್ಚುತ್ತದೆ ಎಂದು ಸಚಿವರು ತಿಳಿಸಿದರು.**

ಇದು ಯಾರು ವ್ಯವಸಾಯ ಮಾಡುತ್ತಾರೋ ಅವರ ಬಳಿ ಭೂಮಿ ಇರಬಾರದು, ಹಣ ಇದ್ದವರ ಕೈಯಲ್ಲಿ ಇರಬೇಕು ಎಂಬಂತಿದೆ. ಸರ್ಕಾರದ ಈ ನೀತಿಯ ವಿರುದ್ಧ ಜೂ. 27 ರಿಂದ 30 ತನಕ ರಾಜ್ಯದ 1000 ಗ್ರಾಮ ಪಂಚಾಯಿತಿಗಳ ಎದುರು ಪ್ರತಿಭಟನೆ ನಡೆಸಲಾಗುತ್ತದೆ.

। ಜೆ.ಸಿ. ಬಯ್ಯಾರೆಡ್ಡಿ

### 108 ಎಕರೆಗೆ ಅವಕಾಶ

**ಉದ್ದೇಶಿತ ಕಾಯ್ದೆ ತಿದ್ದುಪಡಿಯಿಂದ ಕುಟುಂಬವಿಲ್ಲದ ವ್ಯಕ್ತಿ ಅಥವಾ ಐದು ಮಂದಿ ಇರುವ ಒಂದು ಕುಟುಂಬ 108 ಎಕರೆವರೆಗೆ ಜಮೀನು ಖರೀದಿಸಬಹುದಾಗಿದೆ. ಕೃಷಿ ಭೂಮಿ ಖರೀದಿಗೆ ಇದ್ದ ಆದಾಯ ಮಿತಿಯನ್ನೂ ತೆಗೆದು ಹಾಕಲು ಸರ್ಕಾರ ತೀರ್ಮಾನಿಸಿದೆ.**

### ಅನುಕೂಲಗಳು

- ಉದ್ಯಮಿಗಳು/ ಬಂಡವಾಳ ಹೂಡಿಕೆದಾರರು ಸುಲಭವಾಗಿ ಕೃಷಿ ಭೂಮಿ ಮಾಲೀಕರಾಗಬಹುದು
- ಆದಾಯ ಮಿತಿ ಇಲ್ಲದೇ ಇರುವುದರಿಂದ ಶ್ರೀಮಂತರು ನೆರೆ ರಾಜ್ಯದ ಬದಲಾಗಿ ರಾಜ್ಯಕ್ಕೆ ಬರಬಹುದು
- ಕೃಷಿ ಭೂಮಿ ಬೆಲೆ ಏರಿಕೆಯಾಗಿ ರೈತರಿಗೆ ಅನುಕೂಲ
- ಗುತ್ತಿಗೆ ಕೃಷಿಗೆ ಹಾಗೂ ಕಂಪನಿ ಕೃಷಿಗೆ ಅನುಕೂಲ
- ಪಾಳು ಬಿದ್ದ ಭೂಮಿಯೂ ಕೃಷಿಗೆ ಬಳಕೆ ಆಗುತ್ತದೆ

### ಆತಂಕವೇನು?

- ಕೃಷಿ ಭೂಮಿ ಪರಭಾರೆಯಾಗುವ ಅಪಾಯ ಹೆಚ್ಚು
- ಸಣ್ಣ ಹಿಡುವಳಿದಾರರು, ಬಡವರು ಭೂಮಿ ಕಳೆದುಕೊಳ್ಳುವ ಸಾಧ್ಯತೆಗಳಿವೆ
- ಕೃಷಿಯೇತರ ಚಟುವಟಿಕೆಗಳಿಗೆ ದುರ್ಬಳಕೆ ಮಾಡಿಕೊಡುವ ಅಪಾಯವು